**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಒ ಎಸ್. ನಂ :-** | 74/2005 |
| **ಪಿ.ಡಬ್ಲ್ಯೂ** | **1** |
| **ದಿನಾಂಕ :-** | **24.03.2025** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್ ಎಸ್ ವಕೀಲರಿಂದ**

ಚಿಕ್ಕಣ್ಣಯ್ಯ ನವರ ಜೊತೆ ಹುಟ್ಟಿದವರು 3 ಜನ. ಅವರು ಚಿಕ್ಕಣ್ಣಯ್ಯ, ಮುನಿಯಪ್ಪ ಮತ್ತು ಜಿ ಮುನಿಸ್ವಾಮಪ್ಪ. ನಮ್ಮ ಅಪ್ಪ ಚಿಕ್ಕಅಣ್ಣಯ್ಯಪ್ಪನವರ ಮಗ. ಗುರಪ್ಪನವರ ಮಗ ಜಿ ಮುನಿಸಾಮಪ್ಪ ಎಂದರೆ ಸರಿ. ಮುನಿಯಪ್ಪನವರ ಮಗ ವೆಂಕಟರಮಣಪ್ಪ ಎಂದರೆ ಸರಿ. ಅವರು ಮೃತಪಟ್ಟಿದ್ದಾರೆ ಎಂದರೆ ಸರಿ. ಅವರ ಹೆಂಡತಿ ಚಿನ್ನಮ್ಮ ಎಂದರೆ ಸರಿ. ರಾಮಯ್ಯ ಮುನಿಯಪ್ಪನವರ ಮಗ ಎಂದರೆ ಸರಿ. ರಾಮಯ್ಯ ಮೃತಪಟ್ಟಿದ್ದು, ಅವರ ಹೆಂಡತಿ ಬಾಲಮ್ಮ ಎಂದರೆ ಸರಿ. ಪಾಪಯ್ಯ ಎಂದರೆ ಗುರಪ್ಪನವರ ತಂದೆ. ಪಾಪಯ್ಯನವರಿಗೆ ಸಿದ್ದಪ್ಪ, ಗುರಪ್ಪ @ ಬಿಡ್ಡಪ್ಪ, ಹನುಮಂತಪ್ಪ, ಮುನಿರಾಜು, ಚಿಕ್ಕಸಿದ್ದಪ್ಪ ಮತ್ತು ಚಿಕ್ಕಮುನಿವೆಂಕಟಪ್ಪ ಮಕ್ಕಳು ಎಂದರೆ ಸರಿ. ಚಿಕ್ಕಸಿದ್ದಪ್ಪ ಮೃತಪಟ್ಟಿರುತ್ತಾರೆ, ಅವರ ಹೆಂಡತಿ ರುಕ್ಮಿಣಿಯಮ್ಮ ಎಂದರೆ ಸರಿ. ಜಿ ಮುನಿಸ್ವಾಮಪ್ಪ ಪತ್ರ ಬರಹಗಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಿ ಮುನಿಸ್ವಾಮಪ್ಪ ವ್ಯವಸಾಯ ಮಾಡಿಸುತ್ತಿದ್ದರು. ಈ ಮೇಲೆ ಹೇಳಿದ ಎಲ್ಲರೂ 1978 ರ ಮೊದಲು ಬಾಯಿ ಮಾತಿನ ಮೂಲಕ ಆಸ್ತಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 1988 ರ ಮೊದಲು ನಮ್ಮ ಎಲ್ಲಾ ಕುಟುಂಬಗಳು ಬೇರೆ ಬೇರೆಯಾಗಿ ಬೇರೆ ಬೇರೆ ವ್ಯವಹಾರ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು ನಾನು 5 ನೇ ತರಗತಿಯಲ್ಲಿ ಇದ್ದಾಗ ಬೆಂಗಳೂರಿಗೆ ಬಂದು ವಾಸ ಮಾಡುತ್ತಿದ್ದೆವು. ಊರಿನಲ್ಲಿ ನಮ್ಮ ಚಿಕ್ಕಪ್ಪ ಎಲ್ಲ ನೋಡಿಕೊಳ್ಳುತ್ತಿದ್ದರು. ನನಗೆ ಈಗ 52 ವರ್ಷ. ಸುಮಾರು 40 ವರ್ಷದಿಂದ ಅಂದರೆ 1985 ರಿಂದ ನಾನು ಬೆಂಗಳೂರಿನಲ್ಲಿ ವಾಸ ಎಂದರೆ ಸರಿ. ಸುಮಾರು 40 ವರ್ಷಗಳ ಹಿಂದೆ ನಮ್ಮ ಕುಟುಂಬದ ಆಸ್ತಿಗಳ ಬಗ್ಗೆ ಏನು ವ್ಯವಹಾರ ಆಗಿತ್ತು ಎಂದು ನನಗೆ ತಿಳಿದಿಲ್ಲ. ಆಗ ಎಲ್ಲರು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದರು. ನಾನು ಡಿಪ್ಲೋಮಾ ಓದಿರುತ್ತೇನೆ. ನಿಪಿ 1 ನಮ್ಮ ಕುಟುಂಬದಲ್ಲಿ ಮಾಡಿಕೊಳ್ಳಲಾಗಿದೆ ಎಂದು ಹೇಳುವ ವಿಭಾಗ ಪತ್ರ ಎಂದರೆ ಸರಿ. ನಿಪಿ 1 ರಲ್ಲಿ 10 ನೇ ಸಾಲಿನಲ್ಲಿರುವ ಖಂಡಿಕೆ ಕಡೆ ವರೆಗೂ ಸರಿ ಇದೆ. ಸದರಿ ನಿಪಿ 1 ರಲ್ಲಿ ಯಲ್ಲಪ್ಪ ಎಂದು ಸಹಿ ಮಾಡಿರುವುದು ನನ್ನ ತಂದೆ ಹಾಗೂ ಜಿ ಮುನಿಸ್ವಾಮಪ್ಪ ಎಂದು ಸಹಿ ಮಾಡಿರುವುದು ನನ್ನ ತಾತ.

ನಿಪಿ 1 ಪತ್ರ ಬರೆಯುವ ಮೊದಲು ಸರ್ವೆ ನಂ 79/3 16 ಗುಂಟೆ ನನ್ನ ತಂದೆಯ ಸ್ವಾಧೀನದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಟ್ಟಿಗೆ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ನನ್ನ ತಂದೆಯ ಸ್ವಾಧೀನಕ್ಕೆ ಬಂದಿದ್ದು 1988 ರ ಮೊದಲು ಎಂದರೆ ಸರಿಯಲ್ಲ. ದಿನಾಂಕ 20.06.1988 ಹಾಗೂ 15.10.1988 ರ ಕ್ರಯದ ಕರಾರು ಪತ್ರ ಹಾಗೂ ಹಣ ಸಂದ ರಸೀದಿಯ ಸ್ವಾಧೀನ ಪತ್ರ ಸಾಕ್ಷಿಗೆ ತೋರಿಸಿ ಅದರಲ್ಲಿ ಜಿ ಮುನಿಸ್ವಾಮಪ್ಪನವರ ಸಹಿ ಇದೆ ಎಂದು ಕೇಳಲಾಗಿ ಅದಕ್ಕೆ ಆ ದಾಖಲೆಗಳು ಸೃಷ್ಟಿಸಿರುವುದು ಎಂದು ನುಡಿದಿರುತ್ತಾರೆ. ನನ್ನ ತಂದೆ ಕನ್ನಡದಲ್ಲಿ ಸಿ ಯಲ್ಲಪ್ಪ ಎಂದು ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ

ಮಾಡುತ್ತಾರೆ ಎಂದು ನುಡಿಯುತ್ತಾರೆ. ಎಲ್ಲ ಪತ್ರ ವ್ಯವಹಾರಗಳಿಗೆ ನನ್ನ ತಂದೆ ಕನ್ನಡ ಹಾಗೂ ಇಂಗ್ಲೀಷ್ ನಲ್ಲಿ ಮಾಡಿರುತ್ತಾರೆ. ಯಾವ ಯಾವ ಪತ್ರಗಳಿಗೆ ಇಂಗ್ಲೀಷ್ ನಲ್ಲಿ ಸಹಿ ಮಾಡಿದ್ದಾರೆ ಎಂದು ಈಗ ಹೇಳಲು ಆಗುವುದಿಲ್ಲ. ವಿಭಾಗ ಪತ್ರ ಕನ್ನಡದಲ್ಲಿ ಸಹಿ ಮಾಡಿರುವ ವಿಚಾರ ನನ್ನ ತಂದೆ ನನಗೆ ಹೇಳಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**